


**ದೃಷ್ಟಿ**
ವಿ ನರ್ಚರ್ ಫೌಂಡೇಷನ್,
ಬೆಂಗಳೂರು




**ಅನನ್ಯ ಎನ್.ಡಿ.**
5ನೇ ತರಗತಿ, ಕ್ಯಾಪಿಟಲ್
ಪಬ್ಲಿಕ್ ಸ್ಕೂಲ್, ಮೈಸೂರು

# ರಾಯರ ಮಾವು

**ನಾಗೇಶ ಜಿ. ವೈದ್ಯ**
ಕಲೆ: ಸಂತೋಷ್ ಸಸಿಹಿತ್ಲು



ಬೇಸಿಗೆ ರಜೆಯಲಿ ಮಕ್ಕಳು ಸೇರಿ
ಮಾಡುತಲಿದ್ದರು ಮೋಜನ್ನು
ದಿನವಿಡಿ ಆಟ, ತಿಂಡಿ, ಊಟ
ಮರೆತರು ತಾವೇ ತಮ್ಮನ್ನು

ಒಂದಿನ ಕಿಟ್ಟನು ತಂದನು ಸುದ್ದಿ
ಬಂದಿದೆ ಮಾವಿನ ಸೀಜನ್ನು
ಊರಿನ ತೋಟಕೆ ಲಗ್ಗೆಯ ಹಾಕಿ
ತಿಂದು ತೇಗೋಣ ಮಾವನ್ನು

ಮಕ್ಕಳ ದಂಡು ಓಟಕಿತ್ತಿತು
ರಾಯರ ಮಾವಿನ ತೋಟಕ್ಕೆ
ಐದೂ ಗೆಳೆಯರ ಮನತುಂಬೆಲ್ಲಾ
ಹಣ್ಣನು ತಿನ್ನುವ ಬಯಕೆ

ರಾಯರ ತೋಟದಿ ತೂಗುವ ಮಾವು
ಮಕ್ಕಳ ಬಾಯಲಿ ನೀರೂರಿ
ಬದಾಮಿ, ನೀಲಂ, ಆಪೂಸ್, ಮಲ್ಲಿಕಾ
ದಶೇರಾ, ಸಿಂಧೂರ, ರಸಪೂರಿ

ಕಾವಲುಗಾರನು ಕಾಣದೆ ಇರಲು
ಒಟ್ಟಿಗೆ ಜಿಗಿದರು ಬೇಲಿ
ಬೀಸುವ ಗಾಳಿಗೆ ಹಣ್ಣಿನ ಘಮ ಘಮ
ಹರಡಿತು ಎಲ್ಲೆಡೆ ತೋಟದಲಿ

ಹಣ್ಣನು ಕಿತ್ತು ತಿನ್ನುವ ಆತುರ
ಹತ್ತೇಬಿಟ್ಟರು ಮರಗಳನು
ಖುಷಿಯಲಿ ಮಕ್ಕಳು ಕೇಕೆಯ ಹಾಕುತ
ಸವಿದರು ಸಿಹಿಸಿಹಿ ಹಣ್ಣನ್ನು

ಕೂಗನು ಕೇಳಿದ ಕಾವಲುಗಾರ
ಇತ್ತಲೆ ಬಂದನು ಓಡೋಡಿ
ಆತನ ಕೈಯಲಿ ದೊಣ್ಣೆಯ ಕಂಡು
ಹೋಯಿತು ಮಕ್ಕಳ ಮೊಗ ಬಾಡಿ

ಬಿಟ್ಟೇಬಿಟ್ಟರು ಕೊಂಬೆಯ ಅವರು
ಕೈಯದು ನಡುಗಲು ಭಯಕೆ
ಧೊಪ್ಪನೆ ಬಿದ್ದರು ಒಂದೊಂದಾಗಿ
ಐದೂ ಗೆಳೆಯರು ನೆಲಕೆ

ರಾಮು, ಕಿಟ್ಟನ ಕೈ ಹಿಡಿದೆಳೆದು
ಹೊರಟನು ಕಾವಲುಗಾರ
ಉಳಿದ ಮೂವರೂ ಅತ್ತುಕರೆದರು
ಬಿಟ್ಟುಬಿಡೋ ಮಾರಾಯಾ

ಯಾರ ಮಾತನೂ ಕೇಳದ ಆತ
ಎಳೆದೊಯ್ದನು ತೋಟದ ಮನೆಯ ಬಳಿ
ರಾಯರು ಮಂಚದಿ ಕುಳಿತುಕೊಂಡರು
ಅವನಿಗೆ ಬುಟ್ಟಿಯ ತರಹೇಳಿ

ಆತನು ತಂದನು ಹಣ್ಣಿನ ಬುಟ್ಟಿ
ಬುಟ್ಟಿ ತುಂಬ ಹಣ್ಣು
ತಿನ್ನಿರಿ ಮಕ್ಕಳೆ ಎನ್ನುತ ರಾಯರು
ಮುಂದುವರಿಸಿದರು ಮಾತನ್ನು

ಕದ್ದು ತಿಂದರೆ ಕಳ್ಳರಾಗುವಿರಿ
ನಿಮಗೊಪ್ಪಿಗೆಯೇನು?
ಶಾಲೆಗೆ ಹೋಗುವ ಮುದ್ದಿನ ಮಕ್ಕಳು
ಹೀಗಾದರೆ ಗತಿಯೇನು?

ಅರಿತುಕೊಂಡರು ಮಕ್ಕಳು ಆಗ
ತಮ್ಮಯ ತಪ್ಪನ್ನೆಲ್ಲ
ಹೇಳಿದರವರಿಗೆ, ಕ್ಷಮಿಸಿರಿ ರಾಯರೆ
ಇನ್ನು ಕದಿಯುವುದಿಲ್ಲ

ರಾಯರು ನಕ್ಕರು, ಬೆನ್ನು ತಟ್ಟಿದರು
ಜಾಣ ಮಕ್ಕಳು ನೀವೆಲ್ಲ
ಮುಂದೆಯೂ ಬನ್ನಿರಿ, ಕೇಳಿ ಪಡೆಯಿರಿ
ಹಣ್ಣು ಬೇಕಾದಾಗೆಲ್ಲ